## ಕನ್ನಡದ ಕಂದ 'ರಾಜು'

'ರಾಜು ಕನ್ನಡ ಮೀಡಿಯಂ' ರೊಮ್ಯಾಂಟಿಕ್ ಕಾಮಿಡಿ ಕಥೆಯನ್ನು ಹೊಂದಿರುವ ಸಿನಿಮಾ. 'ಫಸ್ಟ್ ರ್‍ಯಾಂಕ್ ರಾಜು' ಸಿನಿಮಾದ ಯಶಸ್ವೀ ಜೋಡಿ ನಿರ್ದೇಶಕ ನರೇಶ್‌ಕುಮಾರ್ ಹಾಗೂ ನಟ ಗುರುನಂದನ್ ಮತ್ತೆ ಜೋಡಿಯಾಗಿರುವ ಚಿತ್ರವಿದು.

ಕನ್ನಡ ಮೀಡಿಯಂನ ಈ ರಾಜು ಕಾಮಿಡಿಯಲ್ಲಿ ಕೂಡ ಕಿಲಾಡಿ. ಇವನ ಜೊತೆಗೆ ಚೆಲುವೆಯರಾದ ಆವಂತಿಕಾ ಶೆಟ್ಟಿ ಹಾಗೂ ಆಶಿಕಾ ರಂಗನಾಥ್ ತಾರಾಗಣದಲ್ಲಿದ್ದಾರೆ. ರಷ್ಯನ್ ಮಾಡೆಲ್ ಏಂಜಲೀನಾ ಕೂಡ ಚಿತ್ರದ ಗ್ಲಾಮರ್ ಗ್ರಾಮರ್ ಹೆಚ್ಚಿಸಿದ್ದಾರೆ. 'ಎಡಕಲ್ಲು ಗುಡ್ಡದ ಮೇಲೆ' ಖ್ಯಾತಿಯ ನಟ ಚಂದ್ರಶೇಖರ್ ಮುಖ್ಯ ಪಾತ್ರವೊಂದರಲ್ಲಿ ನಟಿಸಿದ್ದಾರೆ.

ಅತಿಥಿ ಪಾತ್ರದಲ್ಲಿ ಸುದೀಪ್ ನಟಿಸಿರುವುದು ಚಿತ್ರದ ಮತ್ತೊಂದು ವಿಶೇಷ. ಸುದೀಪ್ ಸೇರ್ಪಡೆಯಿಂದಾಗಿಯೇ ಚಿತ್ರದ ಆಕರ್ಷಣೆ ಮತ್ತಷ್ಟು ಹೆಚ್ಚಿದೆ.

ಭರಪೂರ ಕಾಮಿಡಿಯ ಜೊತೆಗೆ ಕನ್ನಡದ ಕಂಪನ್ನು ಸಾರುವ ಎಳೆಯೂ ಚಿತ್ರದಲ್ಲಿದೆಯಂತೆ. ಇಂಗ್ಲಿಷ್ ವಾತಾವರಣದ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರುವ ಕಥಾನಾಯಕ, ತನ್ನ ಸಹೋದ್ಯೋಗಿಗಳಿಗೆ ಕನ್ನಡದ ದೀಕ್ಷೆ ನೀಡುವುದು ಚಿತ್ರಕಥೆಯ ಕೇಂದ್ರ.





## ಸಾಮಾಜಿಕ ಕಾಳಜಿಯ ಸವಿತಾ

ಎಷ್ಟೆಲ್ಲ ಜಾಗೃತಿ ಕಾರ್ಯಕ್ರಮಗಳ ನಂತರವೂ ಎಚ್‌ಐವಿ ಪೀಡಿತರ ಕುರಿತು ಸಮಾಜದಲ್ಲಿ ಇರುವ ಪೂರ್ವಗ್ರಹಗಳನ್ನು ಹೋಗಲಾಡಿಸಲು ಸಾಧ್ಯವಾಗಿಲ್ಲ. ಚಲನಚಿತ್ರ ಮಾಧ್ಯಮ ಕೂಡ ಎಚ್‌ಐವಿ ಮತ್ತು ಏಡ್ಸ್ ಕುರಿತು ಸಾಮಾಜಿಕ ಜಾಗೃತಿ ಮೂಡಿಸುವ ಹಲವು ಚಿತ್ರಗಳನ್ನು ರೂಪಿಸಿದೆ. ಆದರೆ, ಇಂಥ ಅನೇಕ ಪ್ರಯುತ್ನಗಳು ಹಸಿಬಿಸಿಯಾಗಿರುವುದೇ ಹೆಚ್ಚು. ನಿರ್ದೇಶಕ ರಾಜು ಹಲಗೂರು ಈ ಸಾಮಾಜಿಕ ಸಮಸ್ಯೆಯನ್ನು ಅತ್ಯಂತ ಗಂಭೀರವಾಗಿ ನೋಡುವ ಪ್ರಯತ್ನ ನಡೆಸಿದ್ದಾರೆ.

'ಮದರ್ ಸವಿತಾ' ರಾಜು ಹಲಗೂರು ನಿರ್ದೇಶನದ ಸಿನಿಮಾ. ತೆರೆ ಕಾಣಲು ಸಿದ್ಧತೆ ನಡೆಸಿರುವ ಈ ಸಿನಿಮಾ ಸಾಮಾಜಿಕ ಜಾಗೃತಿಯ ಜೊತೆಗೆ ಎಚ್‌ಐವಿ ಪೀಡಿತರಲ್ಲಿ ಧನಾತ್ಮಕ ಮನೋಭಾವ ಮೂಡಿಸುವ ಕೆಲಸವನ್ನೂ ಮಾಡುತ್ತದೆಯಂತೆ. ಕಥೆ, ಚಿತ್ರಕಥೆ ರೂಪಿಸಲು ನಿರ್ದೇಶಕರು ಸಾಕಷ್ಟು ಅಧ್ಯಯನ ನಡೆಸಿದ್ದಾರಂತೆ. ಎಚ್‌ಐವಿ ಬಾಧಿತರು ಹಾಗೂ ಲೈಂಗಿಕ ಕಾರ್ಯಕರ್ತೆಯರನ್ನು ಭೇಟಿಯಾಗಿ ಸಮಸ್ಯೆಯ ವಿವಿಧ ಮುಖಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ. ಬಾಧಿತರ ನೋವಿನ ಕಥೆಗಳನ್ನು ಸಾವಧಾನದಿಂದ ಆಲಿಸಿದ್ದಾರೆ. ತದ ನಂತರವೇ ಅವರು ಚಿತ್ರದ ಕಥೆ ಬರೆಯಲು ಮುಂದಾಗಿದ್ದಾರೆ.

ಸಿನಿಮಾ ಎನ್ನುವುದು ಮನರಂಜನೆಯ ಮಾಧ್ಯಮ ಎನ್ನುವ ಜನಪ್ರಿಯ ನಂಬಿಕೆಯನ್ನು ರಾಜು ಹಲಗೂರು ಕೂಡ ಒಪ್ಪಿಕೊಳ್ಳುತ್ತಾರೆ. ಆದರೆ, ರಂಜನೆಯ ಜೊತೆಗೆ ಸಾಮಾಜಿಕ ಕಾಳಜಿಯ ಜವಾಬ್ದಾರಿಯೂ ದೃಶ್ಯ ಮಾಧ್ಯಮಕ್ಕಿದೆ ಎನ್ನುವುದು ಅವರ ನಂಬಿಕೆ. ಈ ನಂಬಿಕೆಯಿಂದಲೇ ಅವರು 'ಮದರ್ ಸವಿತಾ' ರೂಪಿಸಿದ್ದಾರೆ.

ದೀಪಕ್ ಹಾಗೂ ಮಾನಸ ಚಿತ್ರದ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದಾರೆ. ಎಚ್‌ಐವಿ ಬಗ್ಗೆ ಆತಂಕ ಪಡುವುದು ಬೇಡ. ಬಾಧಿತರನ್ನು ತಿರಸ್ಕಾರದಿಂದ ನೋಡುವುದು ಬೇಡ. ಅವರು ಕೂಡ ಸಾಮಾನ್ಯರಂತೆ ಜೀವನ ನಡೆಸಬಹುದು ಎನ್ನುವುದನ್ನು ಬಿಂಬಿಸುವ ಪಾತ್ರಗಳಲ್ಲಿ ಅವರು ನಟಿಸಿದ್ದಾರೆ. ಸುರೇಶ್‌ಚಂದ್ರ ಸಂಗೀತ ಹಾಗೂ ನಾಗರಾಜು ಛಾಯಾಗ್ರಹಣ ಚಿತ್ರಕ್ಕಿದೆ.